ದಿನಾಂಕಃ 04-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ ರವರ ಪರ ವಕೀಲರಿಂದ,

1) ನಾನು ಸರ್ಕಾರಿ ಶಾಲೆಯಲ್ಲಿ ಶಿಕ್ಷಕನಾಗಿ ಸುಮಾರು 27 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನನ್ನ ಮಕ್ಕಳು ಪದವಿ ವ್ಯಾಸಂಗ ಮತ್ತು ಎಂ ಬಿ ಬಿ ಎಸ್ ವ್ಯಾಸಂಗ ಮಾಡುತ್ತಿದ್ದಾಳೆ. ನನ್ನ ಮಗಳಿಗೆ ಎಂ ಬಿ ಬಿ ಎಸ್ ಸರ್ಕಾರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಳೆ. ನನಗೆ ವೇತನ ಮತ್ತು ವ್ಯವಸಾಯದಿಂದ ಆದಾಯ ಇರುತ್ತದೆ. ನನಗೆ ವ್ಯವಸಾಯ ಜಮೀನು ಇದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ.

2) ಪ್ರತಿವಾದಿ ಸುಮಾರು 10 ವರ್ಷಗಳಿಂದ ಪರಿಚಯ ಇರುತ್ತಾರೆ. ದಿನಾಂಕ 23/10/2020 ರಂದು ನನ್ನ ಮತ್ತು ಪ್ರತಿವಾದಿಯ ನಡುವೆ ಕರಾರಿನ ಬಗ್ಗೆ ಮಾತುಕತೆ ಆಗಿರುತ್ತದೆ. ಪ್ರತಿವಾದಿ ಚನ್ನೆಗೌಡ ರವರ ಮೂಲಕ ತನ್ನ ಮನೆಯನ್ನು ಮಾರಾಟ ಮಾಡುತ್ತೇನೆ ಎಂದು ನನಗೆ ತಿಳಿಸಿರುತ್ತಾರೆ. ಕರಾರು ಪತ್ರ ಆಗುವ ಕಾಲಕ್ಕೆ ಪ್ರತಿವಾದಿ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಡೋರನಹಳ್ಳಿ ಪಂಚಾಯತಿಗೆ ಸೇರಿದಿ ದಾಖಲೆಯನ್ನು ನೋಡಿರುತ್ತೇನೆ.

3) ಪ್ರತಿವಾದಿಯ ಮನೆಯ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ಸದರಿ ಸ್ವತ್ತು 11 ಬಿ ಸ್ವತ್ತು ಆಗಿರುತ್ತದೆ. ಪ್ರತಿವಾದಿಯ ಮನೆಯನ್ನು ನಾನು ನೋಡಿರುತ್ತೇನೆ. ಕರಾರು ಪತ್ರ ಆಗುವ ಕಾಲಕ್ಕೆ ಚನ್ನೆಗೌಡ ಮತ್ತು ಮಾರುತಿ ಪ್ರಸಾದ ಇದ್ದರು. ಮಾರುತಿ ಪ್ರಸಾದ್ ಶಿಕ್ಷಕರು ಎಂದರೆ ಸರಿ. ರೂ. 11,45,000/- ಮನೆ ಮಾರಾಟ ಮಾಡುತ್ತೇವೆ ಎಂದು ಮಾತುಕತೆ ಆಗಿತ್ತು. ಮುಂಗಡ ಹಣವಾಗಿ ಚೆಕ್ಕಿನ ಮೂಲಕ 1,50,000/- ಮತ್ತು ನಗದು ರೂಪದಲ್ಲಿ ರೂ, 1,95,000/- ದಿನಾಂಕ 23/10/2020 ರಂದು ನೀಡಿರುತ್ತೇನೆ. ಕರಾರು ಪತ್ರ ಸಮಯದಲ್ಲಿ ರೂ. 3,45,000/- ಹಣವನ್ನು ನೀಡಿರುತ್ತೇನೆ. 8,00,000/- ಬಾಕಿ ಹಣ ಇದೆ ಎಂದು ಕರಾರು ಪತ್ರದಲ್ಲಿ ಬರೆಯಲಾಗಿದೆ. ಕರಾರು ಪತ್ರದಲ್ಲಿ 3 ವರ್ಷದ ಒಳಗೆ ನೋಂದಣಿ

ಮಾಡಿಸಿಕೊಳ್ಳಬೇಕೆಂದು ಷರತ್ತು ಇತ್ತು. ಕರಾರು ಪತ್ರ ಆದ 2 ವರ್ಷ 6 ತಿಂಗಳು ಆದ ನಂತರ ತಿಳುವಳಿಕೆ ಪತ್ರವನ್ನು ವಾದಿಗೆ ನೀಡಿರುತ್ತೇನೆ. 8,00,000/- ನನ್ನ ಬಳಿ ಇತ್ತು. ಸದರಿ ಮೊತ್ತ ನನ್ನ ಬಳಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

4) ನಾನು ಒಂದೇ ಬಾರಿಗೆ ಪ್ರತಿವಾದಿಗೆ ರೂ.5,25,000/- ಹಣವನ್ನು ನೀಡಿರುವುದಿಲ್ಲ. ಆದರೆ, ಮೂರು ಬಾರಿ ಹಣ ನೀಡಿರುತ್ತೇನೆ. ಪ್ರತಿವಾದಿಗೆ ಮೂರು ಬಾರಿ ಹಣ ನೀಡಿದ್ದೇನೆ ಎಂದು ವಾದ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಬರೆದುಕೊಟ್ಟಿರುವ ಹಣ ಸಂದ ರಶೀತಿಯನ್ನು ಹಾಜರುಪಡಿಸಿರುತ್ತೇನೆ. ಪ್ರತಿವಾದಿ ನಷ್ಟ ಪರಿಹಾರ ಹಣ ಕೋಡುತ್ತೇನೆ ಎಂದು ಒಪ್ಪಿ ರೂ.7,25,000/- ಚೆಕ್ಕು ನೀಡಿರುತ್ತಾರೆ.

5) ದಿನಾಂಕ 05/09/2023 ರಂದು ನಾನು ತಿಳುವಳಿಕೆ ಪತ್ರ ನೀಡಿದ ನಂತರ ಪ್ರತಿವಾದಿ ಬಂದು ನನ್ನನ್ನು ಬೇಟಿ ಮಾಡಿರುತ್ತಾರೆ. ಪ್ರತಿವಾದಿಗೆ ಕಳುಹಿಸಿರುವ ಎರಡು ತಿಳುವಳಿಕೆ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಕರಾರು ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕನ್ನು ಬರೆಯುವ ಕಾಲಕ್ಕೆ ವಸಂತಕುಮಾರ, ಚನ್ನೇಗೌಡ ಮತ್ತು ಪ್ರತಿವಾದಿ ಇದ್ದರು. ಪ್ರತಿವಾದಿ ಚೆನ್ನೆಗೌಡ ರವರ ಬರಹದಲ್ಲಿ ಚೆಕ್ಕನ್ನು ಬರೆಸಿರುತ್ತಾರೆ. ಚೆಕ್ಕಿನಲ್ಲಿರುವ ದಿನಾಂಕನವನ್ನು ಚೆನ್ನಗೌಡ ರವರು ಬರೆದಿರುತ್ತಾರೆ.

6) ಸಾಲಿಗ್ರಾಮದ ಹರೀಶ್ ನನ್ನ ಪತ್ನಿಯ ತಮ್ಮ ಎಂದರೆ ಸರಿ. ಹರೀಶ್ ರವರ ತಂದೆ ಹೆಸರು ರಾಜೇಗೌಡ. ನಾನು ಮುರಳಿ ರವರ ವಿರುದ್ಧ ಹರೀಶ ರವರ ಮೂಲಕ ಅಸಲು ದಾವೆ ಸಂಖ್ಯೆ 6/2020 ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನರಸಿಂಹೇಗೌಡ ಶಿಕ್ಷಕರು ನನಗೆ ಪರಿಚಯ. ನಾನು ಹರೀಶ್ ರವರ ಮೂಲಕ ದಾವೆಯನ್ನ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಹೊಸಕೋಟೆ ಮುತ್ತಣ್ಣ ರವರು ನನ್ನ ಸ್ನೇಹಿತರು ಎಂದರೆ ಸರಿ. ಅವರ ವಿರುದ್ಧ ನಾನು ಚೆಕ್ಕು ಅಮಾನ್ಯ ಪ್ರಕರಣ ದಾಖಲು

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಕೆ ಆರ್ ನಗರ ಪೋಲಿಸ್ ಠಾಣೆಯಲ್ಲಿ ಬಡ್ಡಿ ವ್ಯವಹಾರ ಮಾಡುವುದಿಲ್ಲ ಎಂದು ಮುಚ್ಚಳಿಕೆ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ